# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಸಿಡಿ/3132-2022
ಮಂಡನಾಧಿಕಾರಿಗಳ ಶಾಖೆ : ಪಿಓ-ಎ.ಆರ್.ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 01-02-2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ವಾಸುದೇವ, ದ್ವಿ.ದ.ಸ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ,ಬೆಂಗಳೂರು** - ಆದ ಇವರು ಸರ್ಕಾರಿ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು ಸಿಟಿ ವಿಭಾಗ, ಬೆಂಗಳೂರು ಜಿಲ್ಲೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ವಾಸುದೇವ, ದ್ವಿ.ದ.ಸ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರು ದೂರುದಾರರಾದ **ಶ್ರೀ ಚಂದ್ರಶೇಖರ್.ಆರ್ ಬಿನ್ ರಾಮ ಸಂಜೀವಯ್ಯ, (ಪ್ರಾಜೆಕ್ಟ್ ಡೈರೆಕ್ಟರ್), ಜಿಯಾನ್ ಸಿಸ್ಟಮ್ಸ್, ನಂ: 14, 2ನೇ ಹಂತ, ಚಂದ್ರಲೇಔಟ್, ವಿಜಯನಗರ, ಬೆಂಗಳೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ತಮ್ಮ ಕೆಲಸದ ಸಂಬಂಧ ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ:** ದೂರುದಾರರು ತನ್ನ ದೂರಿನಲ್ಲಿ, ತಾನು ಮಾನವ ಸಂಪನ್ಮೂಲ ಹೊರಗುತ್ತಿಗೆಗೆ ಸಂಬಂಧಿಸಿದಂತೆ ಸರ್ಕಾರಿ ಇಲಾಖೆಗಳಿಗೆ ನೌಕರರನ್ನು ಒದಗಿಸುವ ವ್ಯವಹಾರವನ್ನು ಮಾಡುತ್ತಿದ್ದು, ಅದರಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು, ಈ ಇಲಾಖೆಯಲ್ಲಿ ಹೊರ ಗುತ್ತಿಗೆ ಅಡಿಯಲ್ಲಿ ನೌಕರರನ್ನು ಒದಗಿಸಲು ಟೆಂಡರ್ ಆಹ್ವಾನಿಸಿದ್ದು, ತಾನು ಕಂಪನಿಯ ಪರವಾಗಿ ಸದರಿ ಟೆಂಡರ್ ಪ್ರಕ್ರಿಯಲ್ಲಿ ಭಾಗವಹಿಸಿದ್ದು, ಟೆಂಡರ್ ಸಂಖ್ಯೆ: ಅಭಿವೃದ್ಧಿ : /09/2018-19 ಆಗಿದ್ದು, ಸದರಿ ಈ ಟೆಂಡರ್‌ನಲ್ಲಿ ತಮ್ಮ ಸಂಸ್ಥೆಯು ಎಲ್-1 (ಲೊಯೆಸ್ಟ್ ಬಿಡ್) ಆಗಿ ಹೊರಹೊಮ್ಮಿ, ಯಶಸ್ವಿ ಬಿಡ್‌ದಾರರಾಗಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಗುತ್ತಿಗೆ ಕಾರ್ಯದ

ಬಗ್ಗೆ ಭದ್ರತಾ ಠೇವಣಿ ಹಾಗೂ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಪತ್ರವನ್ನು ನೀಡಿದ ನಂತರ, ಗುತ್ತಿಗೆ ಕಾರ್ಯವನ್ನು ಪ್ರಾರಂಭಿಸಲು ಕಾರ್ಯಾದೇಶವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆಯಬೇಕಾಗಿರುತ್ತದೆ. ಸದರಿ ಕಛೇರಿಯಲ್ಲಿ ಕಾರ್ಯಾದೇಶ ತಯಾರಿಸಿ ಸಂಬಂಧಪಟ್ಟ ಮೇಲಾಧಿಕಾರಿಯ ಸಹಿಯಾದ ನಂತರ, ಸದರಿ ಕಾರ್ಯಾದೇಶವನ್ನು ಎದುರುದಾರರ ಕಛೇರಿಯಲ್ಲಿ ಜಾರಿ ಮಾಡಬೇಕಾಗಿರುತ್ತದೆ. ಆದರೆ, ಸದರಿ ಇಲಾಖೆಯಲ್ಲಿ ಎದುರುದಾರರು ಕಾರ್ಯಾದೇಶವನ್ನು ಜಾರಿ ಮಾಡಲು ವಿನಾ ಕಾರಣ ತಡಮಾಡಿರುತ್ತಾರೆ ಹಾಗೂ ದೂರುದಾರರಿಂದ 3 ಲಕ್ಷ ರೂ.ಗಳ ಲಂಚದ ಹಣವನ್ನು ನೀಡುವಂತೆ ಒತ್ತಾಯ ಮಾಡಿರುತ್ತಾರೆ. ದಿ: 29/05/2019 ರಂದು ಎದುರುದಾರರು ತಮ್ಮ ಮೊಬೈಲ್ ದೂರವಾಣಿ ಸಂಖ್ಯೆ: 9620909721ರ ಮೂಲಕ ದೂರುದಾರರ ಮೊಬೈಲ್ ಸಂಖ್ಯೆ: 9986457789ಕ್ಕೆ ಕರೆ ಮಾಡಿ, ದೂರುದಾರರು ತನ್ನನ್ನು ಭೇಟಿಯಾಗಲು ಸೂಚಿಸಿದರ ಮೇರೆಗೆ, ದೂರುದಾರರು ಅದೇ ದಿನ ಸಂಜೆ 5-15 ಗಂಟೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು ನಗರ ರವರ ಕಛೇರಿಗೆ ಹೋಗಿ, ಎದುರುದಾರರನ್ನು ಭೇಟಿ ಮಾಡಿದ್ದು, ಎದುರುದಾರರು ಆ ಸಮಯದಲ್ಲಿ ಕಂಪನಿಯ ಕೆಲಸದ ಬಗ್ಗೆ ಮಾತನಾಡಿ 3 ಲಕ್ಷ ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಲಂಚದ ಹಣವನ್ನು ಕೊಟ್ಟಲ್ಲಿ, ಕಾರ್ಯಾದೇಶ ನೀಡುತ್ತೇನೆ ಎಂದು ತಿಳಿಸಿರುತ್ತಾರೆ. ನಂತರ, ದೂರುದಾರರು ಕಛೇರಿಯಿಂದ ಆಚೆ ಬರುವಾಗ ಎದುರುದಾರರು ದೂರುದಾರರ ಹಿಂದೆ ಬಂದು ಮತ್ತೆ 3 ಲಕ್ಷ ಹಣ ಕೊಟ್ಟರೆ ದೂರುದಾರರ ಕೆಲಸಕ್ಕೆ ಯಾವುದೇ ಅಡೆತಡೆ ಮಾಡದೇ ಕೆಲಸವನ್ನು ಮಾಡಿಕೊಡುತ್ತೇನೆ, ಒಂದು ವೇಳೆ ಕೊಡದಿದ್ದರೆ ಮುಂದೆ ಬರುವ ಕಂಪನಿಯ ಕೆಲಸಗಳಿಗೆ ತೊಂದರೆ ನೀಡುವುದಾಗಿ ತಿಳಿಸಿರುತ್ತಾರೆ. ದೂರುದಾರರು, ತನ್ನ ಹಾಗೂ ಎದುರುದಾರರ ನಡುವೆ ನಡೆದ ಸಂಭಾಷಣೆಯನ್ನು ತನ್ನ ರೆಡ್ಮಿ ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಂಡಿರುತ್ತಾರೆ. ದೂರುದಾರರು ದಿ: 29/05/2019 ರಂದು ಸಂಜೆ ಎದುರುದಾರರನ್ನು ಭೇಟಿಯಾಗಿ 3 ಲಕ್ಷ ಹಣ ಕೊಡುತ್ತೇನೆ ಎಂದು ಹೇಳಿದ ಮೇಲೆ ದಿ: 30/05/2019 ರಂದು ಸುಮಾರು: 11.40 ಗಂಟೆಯ ಸಮಯದಲ್ಲಿ ಎದುರುದಾರರು ದೂರುದಾರರ ಕಂಪನಿಯ ಇ-ಮೇಲ್ ವಿಳಾಸಕ್ಕೆ ಕಾರ್ಯಾದೇಶ ಪತ್ರವನ್ನು ರವಾನಿಸಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ್ದರಿಂದ, ದಿನಾಂಕ: 30/05/2019 ರಂದು ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಸಿಟಿ ವಿಭಾಗ, ಬೆಂಗಳೂರು, ಇವರಿಗೆ ಎದುರುದಾರರ ವಿರುದ್ದ ದೂರನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯ ಸಿಡಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ದೂರಿನ ಮೇರೆಗೆ ಮೊಕದ್ದಮೆ ಸಂಖ್ಯೆ : 18/2019 ಪಿಸಿ ಕಾಯ್ದೆ 1988 ಕಲಂ 7 ರನ್ವಯ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

3. ದಿನಾಂಕ: 31/05/2019 ರಂದು ತನಿಖಾಧಿಕಾರಿಯವರು ಪಂಚರುಗಳಾದ ಪಂಚ-1 ಶ್ರೀ ಶಿವಣ್ಣ, ಪಂಚ-2 ಶ್ರೀ ಮಲ್ಲಿಕಾರ್ಜುನ, ಇವರುಗಳನ್ನು ಬರಮಾಡಿಕೊಂಡು, ಇವರಿಗೆ ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 3,00,000/- ರೂ.ಗಳನ್ನು ಹಾಜರುಪಡಿಸಿರುತ್ತಾರೆ. (ಹಣದ ಡಿನಾಮಿನೇಷನ್ 2000 x 150) ತನಿಖಾಧಿಕಾರಿ ಸೂಚನೆ ಮೇರೆಗೆ, ಪಂಚ-2 ಶ್ರೀ ಮಲ್ಲಿಕಾರ್ಜುನ ನೋಟಿನ ಮೌಲ್ಯ ಮತ್ತು

ನಂಬರುಗಳನ್ನು ಪರಿಶೀಲಿಸಿ, ತಾಳೆ ಮಾಡಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 3,00,000/- ರೂ.ಗಳ ಲಂಚದ ಹಣವನ್ನು ಎಣಿಸಿ, ದೂರುದಾರರು ಧರಿಸಿದ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಲಂಚದ ಹಣವನ್ನು ಎದುರುದಾರರು ಕೇಳಿ ಪಡೆದಾಗ, ದೂರುದಾರರು ತನ್ನ ಕೈಯಿಂದ ತನ್ನ ತಲೆಯನ್ನು ಕರೆದುಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆ ನೀಡಿ, ಪಂಚ-1 ರವರು ದೂರುದಾರರ ಜೊತೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿ ದೂರುದಾರರಿಗೆ ತನಿಖಾಧಿಕಾರಿಯವರು ಘಟನೆಗೆ ಸಂಬಂಧಿಸಿದಂತೆ ಹಂತ ಹಂತವಾಗಿ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ದಿನಾಂಕ: 31/05/2019 ರಂದು ಪಂಚರ ಸಮಕ್ಷಮ ಮಧ್ಯಾಹ್ನ 03.00 ರಿಂದ ಸಾಯಂಕಾಲ 04.30 ಗಂಟೆಗೆ ಬರೆದಿರುತ್ತಾರೆ.

4. ದಿನಾಂಕ: 31/05/2019 ರಂದು ತನಿಖಾಧಿಕಾರಿಯು, ಪಂಚರನ್ನು, ಸಿಬ್ಬಂದಿಯನ್ನು ಹಾಗೂ ದೂರುದಾರರನ್ನು ಬರಮಾಡಿಕೊಂಡು, ಕರ್ತವ್ಯ ನಿರ್ವಹಿಸುತ್ತಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಹತ್ತಿರ ಸಾಯಂಕಾಲ 05.30ರ ವೇಳೆಗೆ ಬಂದಿರುತ್ತಾರೆ. ನಂತರ ತನಿಖಾಧಿಕಾರಿಯವರು ಮತ್ತೊಮ್ಮೆ ದೂರುದಾರರಿಗೆ ಹಾಗೂ ಪಂಚ-1 ರವರಿಗೆ ನಿಗದಿತ ಸೂಚನೆಯನ್ನು ನೀಡಿ ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ಆಗ ಸಮಯ ಸಾಯಂಕಾಲ 05.35 ಆಗಿರುತ್ತದೆ.

5. ಸಂಜೆ ಸುಮಾರು ಸಾಯಂಕಾಲ 05.40ರ ಸಮಯದಲ್ಲಿ ದೂರುದಾರರು ಎದುರುದಾರರ ಕಛೇರಿಯಿಂದ ಹೊರಗಡೆ ಬಂದು, ಎದುರುದಾರರು ಕಛೇರಿಯ ಪಕ್ಕದಲ್ಲಿ ನಿಂತಿದ್ದ ತನ್ನ ಸ್ಕೂಟರನ್ನು ತಳ್ಳಿಕೊಂಡು ಹೋಗುವಾಗ, ಎದುರುದಾರರ ಜೊತೆ ದೂರುದಾರರು ಸಹ ನಡೆದುಕೊಂಡು ಸಿ.ವಿ.ರಾಮನ್ ನಗರ ಆಸ್ಪತ್ರೆ ಸಿಬ್ಬಂದಿಗಳ ವಸತಿ ನಿಲಯದ ರಸ್ತೆಯ ಪಕ್ಕದಲ್ಲಿ ನಿಂತಿದ್ದ, ದೂರುದಾರರ ಕಾರಿನ ಸಮೀಪ ಬಂದಿರುತ್ತಾರೆ. ನಂತರ, ದೂರುದಾರರು ತಾನು ಡ್ರೈವರ್ ಸೀಟಿನಲ್ಲಿ ಕುಳಿತುಕೊಂಡಾಗ, ಎದುರುದಾರರು ದೂರುದಾರರ ಪಕ್ಕದ ಸೀಟಿನಲ್ಲಿ ಕುಳಿತುಕೊಂಡಿದ್ದು, ಸ್ವಲ್ಪ ಸಮಯದ ನಂತರ ಎದುರುದಾರರು ಕಾರಿನಿಂದ ಇಳಿದು, ಕಾರಿನ ಪಕ್ಕ ನಿಲ್ಲಿಸಿದ ಸ್ಕೂಟರ್ ಕಡೆಗೆ ಬಲಗೈನಲ್ಲಿ ಒಂದು ಕೆಂಪು ಹಾಗೂ ನೀಲಿ ಬಣ್ಣದಿಂದ ಕೂಡಿದ್ದ ಪ್ಲಾಸ್ಟಿಕ್ ಕವರ್ ಅನ್ನು ಹಿಡಿದುಕೊಂಡು ಹೋಗುತ್ತಿದ್ದ ಸಮಯದಲ್ಲಿ, ದೂರುದಾರರು ಕಾರಿನಿಂದ ಇಳಿದು, ತನಿಖಾಧಿಕಾರಿಯವರಿಗೆ ನಿಗದಿತ ಸೂಚನೆಯನ್ನು ನೀಡಿರುತ್ತಾರೆ. ಸೂಚನೆಯನ್ನು ಅನುಸರಿಸಿ ತನಿಖಾಧಿಕಾರಿಯವರು ದೂರುದಾರರ ಸಮೀಪ ಸಿಬ್ಬಂಧಿಯೊಂದಿಗೆ ಹಾಗೂ ಪಂಚ-2 ರವರೊಂದಿಗೆ ಸಮೀಪಕ್ಕೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿಕೊಟ್ಟು, ತನ್ನಿಂದ ಲಂಚದ ಹಣ 3 ಲಕ್ಷ ರೂ.ಗಳನ್ನು ಕೇಳಿ ಪಡೆದು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿಕೊಂಡಿರುತ್ತಾರೆಂದು ಹೇಳಿರುತ್ತಾರೆ. ನಂತರ

L.

ತನಿಖಾಧಿಕಾರಿಯವರು ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ವಿಚಾರಣೆ ಮಾಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಎದುರುದಾರರು ತನ್ನ ಬಲಗೈಯಲ್ಲಿ ಹಿಡಿದಿದ್ದ, ನೀಲಿ ಹಾಗೂ ಕೆಂಪು ಬಣ್ಣದ ಪ್ಲಾಸ್ಟಿಕ್ ಕವರನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆಯಂತೆ, ಪಂಚರು ಸದರಿ ಕವರಿನಿಂದ ಹಣವನ್ನು ಹೊರ ತೆಗೆದುಕೊಂಡು ಅವುಗಳ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಸದರಿ ಹಣ ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ, ಕಂಡು ಬಂದ ನೋಟುಗಳೆಂದು ಖಾತ್ರಿಪಡಿಸಿಕೊಂಡಿರುತ್ತಾರೆ. ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸಿಬ್ಬಂದಿಯು ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಯವರು ತನಿಖೆಯನ್ನು ಮುಂದುವರೆಸಿ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯು ದೂರುದಾರರು ಎದುರುದಾರರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದ ದೃಶ್ಯಾವಳಿಗಳನ್ನು ಪರಿಶೀಲಿಸಿರುತ್ತಾರೆ ಮತ್ತು ಸದರಿ ಸಂಭಾಷಣೆಯನ್ನು ಲಿಪೀಕರಿಸಿರುತ್ತಾರೆ.

6. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಕುರಿತು, ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಯನ್ನು ನೀಡುವಂತೆ ಸೂಚಿಸಿದಾಗ, ಅದಕ್ಕೆ ಎದುರುದಾರರು ತನ್ನ ಸಮಜಾಯಿಷಿಯನ್ನು ಕೆಳಕಂಡಂತೆ ನೀಡಿರುತ್ತಾರೆ.

..... **" ನನ್ನನ್ನು ದಿ: 31-05-2019 ರಂದು ಶ್ರೀ ಚಂದ್ರಶೇಖರ್ ರವರು ಸಂಜೆ: 5-30 ಗಂಟೆಗೆ ಕಛೇರಿಗೆ ಬಂದು ಬನ್ನಿ ಸಾರ್ ನಿಮಗೆ 3 ಲಕ್ಷ ಮೊತ್ತವನ್ನು ನೀಡುತ್ತೇನೆ, ದಯವಿಟ್ಟು ನನ್ನ ಕಾರ್ ಹತ್ತಿರ ಬನ್ನಿ ಅಂತ ಹೇಳಿ ಕಾರಿನ ಒಳಗೆ ಕೂರಿಸಿ ಹಣ ತೆಗೆದುಕೊಳ್ಳಿ ಅಂತಾ ಬಲವಂತವಾಗಿ ನೀಡಿದ್ದು, ಆದರೆ ಅವರಿಗೆ ಸಾಲ ಕೊಡಲು ಕೇಳಿದ್ದೆ, ಶ್ರೀ ಚಂದ್ರಶೇಖರ್ ರವರು ನನ್ನ ವಿರುದ್ಧ ದೂರನ್ನು ನೀಡಿ, ನನ್ನನ್ನು ಈ ರೀತಿ ಪ್ರಕರಣದಲ್ಲಿ ಸಿಲುಕಿಸಿರುತ್ತಾರೆ. ಇದು ಇವರು ಮಾಡಿದ ಕುತಂತ್ರ ಆದ್ದರಿಂದ ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಆದ್ದರಿಂದ ತಾವು ದಯವಿಟ್ಟು ನನ್ನನ್ನು ಪ್ರಕರಣದಿಂದ ಕೈಬಿಡಲು ಕೋರುತ್ತೇನೆ"** ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಸದರಿ ಸಮಜಾಯಿಷಿ ಬಗ್ಗೆ ದೂರುದಾರರ ಅಭಿಪ್ರಾಯ ಕೇಳಿದಾಗ, ದೂರುದಾರರು "ಸಾಲ ಕೊಡಲು ಕೇಳಿದ್ದೆ ಎಂದು ತಿಳಿಸಿರುವುದು ಬಲವಂತವಾಗಿ ಹಣ ಇಟ್ಟೆ ಎಂಬುದು ಸುಳ್ಳಾಗಿರುತ್ತದೆ ಎಂದು ಹೇಳಿದ್ದು, ಎದುರುದಾರರು ಲಂಚದ ಹಣವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಕಾಲಕಾಲಕ್ಕೆ ಸಿಬ್ಬಂದಿಯವರ ಕಡೆಯಿಂದ ಫೋಟೋವನ್ನು ತೆಗೆಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಕ್ರಮ ಜರುಗಿಸಿರುತ್ತಾರೆ. ತನಿಖಾಧಿಕಾರಿಯು ಈ ಸಂಬಂಧವಾಗಿ ಪಂಚರ ಸಮಕ್ಷಮ ದಿ: 30/05/2019 ರಂದು ಸಾಯಂಕಾಲ 6.30 ರಿಂದ ರಾತ್ರಿ 9.30 ರವರೆಗೆ ಟ್ರ್ಯಾಪ್ ಪಂಚನಾಮೆ ಬರೆದಿರುತ್ತಾರೆ.

7. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಪರಸ್ಪರ ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲದಿಂದ ದೃಢಪಟ್ಟಿದೆ.

8. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಯವರು ಎದುರುದಾರರಿಂದ ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

9. ಎದುರುದಾರರಿಗೆ ದಿ: 20/09/2022 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಸದರಿ ಪರಿವೀಕ್ಷಣಾ ಟಿಪ್ಪಣಿಯು ಎದುರುದಾರರಿಗೆ ದಿ: 30/09/2022 ರಂದು ಜಾರಿಯಾಗಿರುತ್ತದೆ. ಎದುರುದಾರರು ದಿ: 05/11/2022ರಂದು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿ ಸಮಜಾಯಿಷಿ ಖಂಡಿಕೆ 1ರಲ್ಲಿ ಮೊ.ಸಂಖ್ಯೆ: 18/2019ರ ದಾಖಲಾತಿ ಹಿನ್ನೆಲೆಯಲ್ಲಿ, ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಇಲಾಖೆ, ಬೆಂಗಳೂರು, ತನ್ನನ್ನು ಸೇವೆಯಿಂದ ಅಮಾನತ್ತು ಮಾಡಿದ್ದು, ನಂತರ ದಿ: 05/12/2019ರ ಆದೇಶ ಸಂಖ್ಯೆ: ಡಿಪಿಎನ್(1)ಸಿಆರ್-09/19-20ರಲ್ಲಿ ತನ್ನನ್ನು ಅಮಾನತ್ತಿನಿಂದ ತೆರವುಗೊಳಿಸಿ, ಸೇವೆಗೆ ಮರುನೇಮಕ ಮಾಡಿರುತ್ತಾರೆ, ಹಾಗಾಗಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕಾರಣ ಇರುವುದಿಲ್ಲ ಎಂದು ಹೇಳಿರುತ್ತಾರೆ. ಖಂಡಿಕೆ 2ರಲ್ಲಿ ತಾನು ದೂರುದಾರರಿಂದ ಲಂಚದ ಹಣಕ್ಕೆ ಒತ್ತಾಯ ಮಾಡಿರುವುದಿಲ್ಲ, ದೂರುದಾರರಿಗೆ ಸಂಬಂಧಿಸಿದ ಕೆಲಸ ಟ್ರ್ಯಾಪ್ ದಿನಾಂಕದಂದು ತನ್ನಲ್ಲಿ ಬಾಕಿ ಉಳಿದಿರಲಿಲ್ಲ. ತನಿಖಾಧಿಕಾರಿಯವರ ಒತ್ತಾಯದ ಮೇರೆಗೆ, ಹಾಗೂ ಅವರೇ ಹೇಳಿದಂತೆ ನನ್ನ ವಿವರಣೆಯನ್ನು ಬರೆದುಕೊಟ್ಟಿರುತ್ತೇನೆ. ದೂರುದಾರರು ಎಸ್.ಪಿ.ಎಂಟರ್‌ಪ್ರೈಸಸ್ ಹೆಸರಿನಲ್ಲಿ ವ್ಯವಹಾರ ಮಾಡುತ್ತಿದ್ದಾಗ, ಈ ಹಿಂದೆ ಸದರಿ ವ್ಯಾಪಾರ ಕಪ್ಪು ಪಟ್ಟಿಗೆ ಸೇರಿಸಲಾಗಿದ್ದು, ಈ ಸಂಬಂಧವಾಗಿ ಕ್ರಿಮಿನಲ್ ಪ್ರಕರಣದ ನಂ: ಸಿ.ಆರ್.ನಂ: 0333/2014, ಉಡುಪಿ ಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ವರದಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದೆಂದು ತನ್ನ ಮೇಲೆ ಅನುಮಾನಿಸಿ, ನನ್ನ ವಿರುದ್ಧ ಸುಳ್ಳು ದೂರನ್ನು ನೀಡಿ ಮೊ.ಸಂಖ್ಯೆ: 18/2019ರಲ್ಲಿ ದಾಖಲಿಸಿರುತ್ತಾರೆ. ದೂರುದಾರರಿಗೆ ಸಂಬಂಧಿಸಿದಂತೆ, ಕೆಲಸ ದಿ: 25/5/2019ರಂದು ತಾನು ಮುಗಿಸಿರುವುದಾಗಿ ತಿಳಿಸಿರುತ್ತಾರೆ. ದೂರುದಾರರಿಂದ ತಾನು ಲಂಚದ ಹಣಕ್ಕೆ ಒತ್ತಾಯಿಸಿರುವುದಿಲ್ಲ. ಹಾಗೂ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ. ಆದ್ದರಿಂದ, ತನ್ನನ್ನು ವಿಚಾರಣೆಯಿಂದ ಮುಕ್ತಗೊಳಿಸಬೇಕಾಗಿ ಕೋರಿರುತ್ತಾರೆ. ಆದರೆ, ಎದುರುದಾರರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ಎದುರುದಾರರ ದುರ್ನಡತೆ ಎಸಗಿರುವುದು ಕಂಡುಬರುತ್ತದೆ.

10. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ ಶ್ರೀ ವಾಸುದೇವ (ನಿವೃತ್ತಿ ದಿನಾಂಕ: 31-05-2028) ಇವರು ತಮ್ಮ ಕರ್ತವ್ಯದಲ್ಲಿ, ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಆದುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/2/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು